ಓ. ಎಸ್. ನಂ. : 52/2014

ಪಿ ಡಬ್ಲು – 1

ದಿಃ 17-04-2017 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು,

**ಮುಂದುವರಿದ ಪಾಟೀಸವಾಲು : ಪ್ರತಿವಾದಿ ಪರ ವಕೀಲರಾದ ಶ್ರೀ ಸಿ.ಎಂ.ಕೆ. ರವರಿಂದ,**

4, ವಾದಿ ಪತ್ರ ತಯಾರಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿದ್ದೇನೆ, ಸದರಿ ವಾದ ಪತ್ರಕ್ಕೆ ನನ್ನ ತಂದೆ ನ್ಯಾಯಾಲಯದ ಆವರಣಕ್ಕೆ ಬಂದು ಸಹಿ ಮಾಡಿರುತ್ತಾರೆ, ವಾದಪತ್ರವನ್ನು ನಾನು ತಿದ್ದುಪಡಿ ಮಾಡಲು ಅರ್ಜಿ ಸಲ್ಲಿಸಿಲ್ಲ, ನಮಗೆ ಸೇರಿದ ದಾವಾ ಆಸ್ತಿ ವಿಪಿಸಿ ನಂಃ 485/ಎ ಆಗಿರುತ್ತದೆ, ಸದರಿ ಆಸ್ತಿಯ 485/ಬಿ ವಿಭಾಗ ನನ್ನ ಕಾಕ ಶ್ರೀಮಂತಪ್ಪನಿಗೆ ಸೇರಿರುತ್ತದೆ, ಮೂಲ 485 ಆಸ್ತಿಗೆ ಮನೆ ಮತ್ತು ಹಿತ್ತಲು ಕೂಡಿ ಇತ್ತು, ಸದರಿ ಮೂಲ ಆಸ್ತಿಯ ಮನೆಯ ಮುಂಚಿ ಬಾಗಿಲು ಪೂರ್ವಾಭಿಮುಖವಾಗಿತ್ತು, ಹಿಸ್ಸೆಯಲ್ಲಿ ನಮಗೆ ದಕ್ಷಿಣ ಭಾಗದ ಆಸ್ತಿ ಮತ್ತು ನನ್ನ ಕಾಕನಿಗೆ ಉತ್ತರ ಭಾಗದ ಆಸ್ತಿ ಹೋಗಿರುತ್ತದೆ, ನಮ್ಮ ಕಾಕನ ಆಸ್ತಿಯ ಪೂರ್ವ ದಿಕ್ಕಿಗೆ ಕೂಡಾ ಸರ್ಕಾರಿ ರಸ್ತೆ ಇದೆ, ಪಶ್ಚಿಮಕ್ಕೆ ನನ್ನ ಕಾಕನ ಹಿಸ್ಸೆಯ ಹಿತ್ತಲು ಇದೆ, ಸದರಿ ಹಿತ್ತಲು ದಾಟಿ ಕೂಡಾ ಪಶ್ಚಿಮಕ್ಕೆ ರಸ್ತೆ ಇದೆ, ಉತ್ತರಕ್ಕೆ ಗುಡ್ಡದಮನಿ ಇವರ ಮನೆ ಇದೆ, ದಕ್ಷಿಣಕ್ಕೆ ನಮ್ಮ ಮನೆ ಇದೆ, ಸದರಿ ಹಿಸ್ಸೆ 1988 ರಲ್ಲಿ ಆಗಿರುತ್ತದೆ, ಸದರಿ ಹಿಸ್ಸೆ ಆದ 2 ವರ್ಷಗಳ ಬಳಿಕ ಪಂಚಾಯತಿಗೆ ಅರ್ಜಿ ಸಲ್ಲಿಸಿ ಎಂಟ್ರಿ ಮಾಡಿಸಿರುತ್ತೇವೆ, ಆ ಸಮಯ ವಾಟಣಿ ಪತ್ರದ ಪ್ರತಿಯನ್ನು ಕೊಟ್ಟಿರಬೇಕು, ನನ್ನ ತಂದೆಯವರಿಗೆ ಗೊತ್ತು, ಸದರಿ ವಾಟಣಿ ಪತ್ರದ ಅಸಲನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು,

5, ನಮ್ಮ ಮತ್ತು ಕಾಕನ ಮನೆ ಚೌಕಾಕಾರವಾಗಿದೆ, ನಮ್ಮ ಆಸ್ತಿಯ ಪೂರ್ವಕ್ಕೆ ಕೂಡಾ ಸರ್ಕಾರಿ ರಸ್ತೆ ಇದೆ, ನಮ್ಮ ಮುಂಚಿ ಬಾಗಿಲು ದಾಟಿದ ಕೂಡಲೇ ಪೂರ್ವಕ್ಕೆ ಸದರಿ ಸರ್ಕಾರಿ ರಸ್ತೆ ಬರುತ್ತದೆ, ನಮ್ಮ ಮತ್ತು ಪ್ರತಿವಾದಿಯರ ಆಸ್ತಿಯ ಮದ್ಯದಲ್ಲಿರುವ ಸದರಿ ಸರ್ಕಾರಿ ರಸ್ತೆಯ ಅಳತೆ ಅಗಲ ಪೂರ್ವ ಪಶ್ಚಿಮ 40 ಅಡಿ ಇದೆ, ಸದರಿ ರಸ್ತೆ ಸರ್ಕಾರಿ ರಸ್ತೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೇನೆ, ಸದರಿ ರಸ್ತೆಯ ಬಗ್ಗೆ ಈ ದಾವೆಯನ್ನು ಸಲ್ಲಿಸಿರುತ್ತೇನೆ, ನಮ್ಮ ಮನೆಯ ಮುಂದೆ ಪೂರ್ವ ದಿಕ್ಕಿಗೆ ಯಾವುದೇ ರಸ್ತೆ ಇಲ್ಲಾ ಎಂದರೆ ಸರಿಯಲ್ಲ, ಸದರಿ ರಸ್ತೆ ಹಾದಾಡಲು ಮಾತ್ರ ಇರುತ್ತದೆ, ಯಾವುದೇ ವಸ್ತುಗಳನ್ನು ಅಲ್ಲಿ ಇಡಲು ಅನುಮತಿ ಇಲ್ಲಾ, ಸದರಿ ರಸ್ತೆ ಊರಿನ ಎಲ್ಲಾ ಸಾರ್ವಜನಿಕರ ಆಸ್ತಿ ಆಗಿದೆ,

6,  ನಿಪಿ-3 ಒಪ್ಪಿಗೆ ಪತ್ರ ಊರಿನ ಮುಖಂಡರು ನಮಗೆ ಬರೆದುಕೊಟ್ಟಿರುತ್ತಾರೆ, ಸದರಿ ಮುಖಂಡರು ಅಂದರೆ ನಿಂಗಪ್ಪ ದೇವನೂರು, ಸಿದ್ದನಗೌಡಾ ಹಿರೇಗೌಡ, ಬಸನಿಂಗಯ್ಯ ಕುಂದೂರಮಠ ಮತ್ತು ಇನ್ನಿಬ್ಬರು ಇರುತ್ತಾರೆ, ಸದರಿ ದಾಖಲೆ ಬರೆಯುವಾಗ ನಾನು ಸಣ್ಣವನಿದ್ದೆ, ಸದರಿ ದಾಖಲೆ ಬರೆಯುವಾಗ ನಾನು ಹಾಜರು ಇರಲಿಲ್ಲ, ನಿಪಿ-3 ನ್ನು ನಿಂಗಪ್ಪ ದೇವನೂರು ಬರೆದಿರುತ್ತಾನೆ, ನಿಪಿ-3 ರಲ್ಲಿ ಬಾಣದ ಗುರುತು ಹಾಕಿ ತಿದ್ದುಪಡಿ ಬರವಣಿಗೆ ಸೇರ್ಪಡೆ ಮಾಡಿರುವುದು ಕಂಡುಬರುತ್ತದೆ, ಸಾಕ್ಷಿ ಮುಂದುವರಿದು ಅದನ್ನು ನಿಂಗಪ್ಪ ದೇವನೂರು ಇವರೇ ಬರೆದಿರುವುದಾಗಿ ನುಡಿಯುತ್ತಾರೆ, ಸದರಿ ಸೇರ್ಪಡೆಗೆ ರುಜು ಇರುವುದಿಲ್ಲ ಎಂದರೆ ಸರಿ, ನಿಪಿ-3 ನ್ನು ನಾನು ಮತ್ತು ನನ್ನ ತಂದೆ ಇತ್ತೀಚೆಗೆ ಖೊಟ್ಟಿಯಾಗಿ ಸೃಷ್ಟಿಸಿರುತ್ತೇವೆಂದರೆ ಸರಿಯಲ್ಲ, ಸದರಿ ದಾಖಲೆಯನ್ನು ನಿಂಗಪ್ಪ ದೇವನೂರು ಬರೆದಿಲ್ಲ ಮತ್ತು ಬೇರೆ ಯಾರೂ ಹಿರಿಯರಾಗಿ ಸಹಿ ಮಾಡಿಲ್ಲಾ ಎಂದರೆ ಸರಿಯಲ್ಲ, ಪ್ರತಿವಾದಿಯರ ಆಸ್ತಿಯನ್ನು ಕಬಳಿಸಲು ನಿಪಿ-3 ನ್ನು ಖೊಟ್ಟಿಯಾಗಿ ಸೃಷ್ಟಿಸಿದ್ದೆನೆಂದರೆ ಸರಿಯಲ್ಲ,

7,  ಪ್ರತಿವಾದಿಯರ ಆಸ್ತಿ ಕೂಡಾ ಚೌಕಾಕಾರವಾಗಿದೆ ಎಂದರೆ ಸರಿ, ನಮ್ಮ ಮನೆಯ ಪೂರ್ವದ ಗೋಡೆಯ ಪೂರ್ವ ದಿಕ್ಕಿಗೆ ಪ್ರತಿವಾದಿಯರ ಜಾಗ ಇದೆ ಎಂದರೆ ಸರಿಯಲ್ಲ, ನನ್ನ ಪ್ರಕಾರ ಅದು ಸರ್ಕಾರಿ ಜಾಗವಾಗಿದೆ, ನಿಪಿ-3 ನಾನು ಹೇಳುವ ಸರ್ಕಾರಿ ರಸ್ತೆ ಬಗ್ಗೆ ಇರುತ್ತದೆ,

8,  ನಾನು ಸದರಿ ರಸ್ತೆಯ ಮೇಲೆ ಒಕ್ಕಲುತನದ ಸಾಮಾಗ್ರಿ ಮತ್ತು ಇತರ ವಸ್ತುಗಳನ್ನು ಇಡುತ್ತೇನೆ, ನಮ್ಮ ಮನೆಯ ಪೂರ್ವದಿಕ್ಕಿನ ಗೋಡೆಯಲ್ಲಿ ಎರಡು ಕಿಟಕಿ ಮತ್ತು ಎರಡು ಹರನಾಳಗಿ ಇದೆ, ಅವು ನಮ್ಮ ಅಜ್ಜನ ಕಾಲದಿಂದಲೂ ಇದೆ, ಅವುಗಳಲ್ಲದೇ ಸದರಿ ಗೋಡೆಯಲ್ಲಿ ಬೇರೆ ಏನೂ ಇಲ್ಲಾ, ಸಾಕ್ಷಿ ಮುಂದುವರಿದು ಗೋಡೆಯ ಮುಂದೆ ಹರನಾಳಗಿ ನೀರು ಬೀಳಲು ನಮಗೆ ಸೇರಿದ ಜಾಗ ಇದೆ ಎಂದು ನುಡಿಯುತ್ತಾರೆ, ಸದರಿ ಜಾಗದ ಅಳತೆ ಪೂರ್ವ ಪಶ್ಚಿಮ ಮೂರುವರೆ ಮೊಳ ಇದೆ, ಉತ್ತರ ದಕ್ಷಿಣ ಅಂದಾಜು 40 ಅಡಿ ಉದ್ದ ಇದೆ, ಸದರಿ ಜಾಗಾ ಕೂಡಾ ದಾವಾ ವಿಪಿಸಿ ನಂಃ 485/ಎ ನಮ್ಮ ಆಸ್ತಿಗೆ ಸಂಬಂಧಪಟ್ಟಿರುತ್ತದೆ, ಸದರಿ ಜಾಗಾವನ್ನು ಪ್ರತಿವಾದಿಯರು ನಮಗೆ ಬಿಟ್ಟು ಕೊಟ್ಟಿಲ್ಲ, ಆ ಬಗ್ಗೆ ಮಾತುಕತೆ ಆಗಿದ್ದ ಬಗ್ಗೆ ನನಗೆ ಗೊತ್ತಿಲ್ಲ, ಹಿರಿಯರಿಗೆ ಗೊತ್ತು, ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ಜಾಗವನ್ನು ಪ್ರತಿವಾದಿಯರು ನಮಗೆ ಬಿಟ್ಟು ಕೊಟ್ಟಿದ್ದಾರೆಂದು ಹೇಳಿ ಬರೆಸಿಲ್ಲ, ನಾನು ನನ್ನ ಮುಖ್ಯ

ವಿಚಾರಣೆಯಲ್ಲಿ ಮತ್ತು ವಾದಪತ್ರದಲ್ಲಿ ಮೇಲೆ ಹೇಳಿದಂತೆ ಎರಡು ಕಿಟಕಿ ಮತ್ತು ಎರಡು ಹರನಾಳಗಿ ಇರುವ ಬಗ್ಗೆ ಹೇಳಿ ಬರೆಸಿದ್ದೇನೆ,

9, ಸದರಿ ಜಾಗದ ಪೂರ್ವ ದಿಕ್ಕಿಗೆ ರಸ್ತೆ ಇದೆ, ಪಶ್ಚಿಮಕ್ಕೆ ಪ್ರತಿವಾದಿಯರ ಮನೆ ಇದೆ, ಉತ್ತರಕ್ಕೆ ನಮ್ಮ ಕಾಕನ ಮನೆ ಇದೆ, ದಕ್ಷಿಣಕ್ಕೆ ಕೂಡಾ ಪ್ರತಿವಾದಿಯರ ಮನೆ ಇದೆ, ಸದರಿ ಮನೆಯ ಗೋಡೆಗೆ ಕಿಟಕಿ ಇದೆಯೋ ಇಲ್ಲವೋ ನಾನು ನೋಡಿಲ್ಲಾ, ಸದರಿ ಮೂರುವರೆ ಮೊಳ ಜಾಗದ ಬಗ್ಗೆ ನಮ್ಮ ಮತ್ತು ಪ್ರತಿವಾದಿಯರ ನಡುವೆ ನಾನು 5 ನೇ ತರಗತಿ ಕಲಿಯುತ್ತಿದ್ದ ಸಮಯ ತಂಟೆ ತಕರಾರು ಆಗಿರುತ್ತದೆ, ಅಂದರೆ ಪ್ರತಿವಾದಿಯರ ತಂದೆ ಮತ್ತು ನನ್ನ ಅಜ್ಜನ ನಡುವೆ ತಂಟೆ ಆಗಿರುತ್ತದೆ, ಅವರು ಸದರಿ ನಾವು ಅಡ್ಡಾಡುವ ಜಾಗದಲ್ಲಿ ಕಟ್ಟೆ ವಗೈರೆ ಹಾಕಲು ಬಂದಿದ್ದರು, ಆ ಸಮಯ ನಾವು ನ್ಯಾಯಾಲಯದಲ್ಲಿ ಯಾವುದೇ ದಾವೆ ಸಲ್ಲಿಸಿಲ್ಲ, ಈ ದಾವೆಯನ್ನು ಸಲ್ಲಿಸುವ 4-5 ದಿನದ ಮೊದಲು ನಮ್ಮ ನಡುವೆ ತಂಟೆ ಬಂದಿರುತ್ತದೆ, ಆ ಸಮಯ ಹಿರಿಯರನ್ನು ಕೂಡಿಸಿದ್ದೆ, ಆ ಸಮಯ ಪಂಚಾಯತಿ ಅಧ್ಯಕ್ಷರಾದ ಈರನಗೌಡಾ ಮಾಳಪ್ಪಗೌಡರ, ಮಹಾದೇವಪ್ಪ ದನದಮನಿ ಮತ್ತು ಇತರರು ಕೂಡಿದರು, ಪ್ರತಿವಾದಿಯರಿಗೆ ಕಟ್ಟೆ ಮತ್ತು ಚಾವಣೆಯನ್ನು ತೆಗೆಯಲು ತಿಳಿಸಿದರು, ಆದರೆ ಪ್ರತಿವಾದಿಯರು ತೆಗೆಯಲಿಲ್ಲ,

10, ನಾನು ಪ್ರತಿವಾದಿಯರ ಕೈಫೀಯತ್ತನ್ನು ಓದಿ ನೋಡಿಲ್ಲಾ, ದಾವಾ ಆಸ್ತಿ ಪ್ರತಿವಾದಿಯರಿಗೆ ಸೇರಿದ್ದು ಎಂದು ಗೊತ್ತಿದ್ದರೂ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ, ನಾವು ಈಗ ಕಾಕನ ಜಾಗಾದಲ್ಲಿ ಅಡ್ಡಾಡುತ್ತಿದ್ದೇವೆ, ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಹಿತಸಂಬಂಧ ಮಾಲ್ಕೀ ಇಲ್ಲಾ ಎಂದರೆ ಸರಿಯಲ್ಲ, ದಾವಾ ಆಸ್ತಿಯಲ್ಲಿ ಯಾವತ್ತೂ ನಾವು ಮಾಲ್ಕೀ ವಹಿವಾಟು ಮಾಡಿಲ್ಲಾ ಎಂದರೆ ಸರಿಯಲ್ಲ, ನಮ್ಮ ಮತ್ತು ಕಾಕನ ನಡುವೆ ನ್ಯಾಯ ಬಂದ ಕಾರಣ ಪ್ರತಿವಾದಿಯರು ತಾತ್ಕಾಲಿಕವಾಗಿ ಅಡ್ಡಾಡಲು ನಮಗೆ ಅವರ ಜಾಗದಲ್ಲಿ ಅನುಮತಿ ನೀಡಿದ್ದರು ಎಂದರೆ ಸರಿಯಲ್ಲ, ಈಗ ನಾವು ಅಡ್ಡಾಡುವ ಕಾಕನ ಜಾಗದಲ್ಲಿ ರಸ್ತೆ ಇದೆ ಎಂದರೆ ಸರಿಯಲ್ಲ, ನಮ್ಮ ನಡುವೆ ಆದ ಹಿಸ್ಸೆಯಲ್ಲಿ ಸದರಿ ಕಾಕನ ಜಾಗದಲ್ಲಿ ಅಡ್ಡಾಡಬೇಕೆಂದು ಕರಾರು ಇದೆ ಎಂದರೆ ಸರಿಯಲ್ಲ, ಆ ಕಾರಣ ವಾಟಣಿ ಪತ್ರ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ, ಪ್ರತಿವಾದಿಯರು ನಮಗೆ ಬೇರೆ ವ್ಯವಸ್ಥೆ ಇರುವ ಕಾರಣ ದಾವಾ ಜಾಗದಲ್ಲಿ ತಾತ್ಕಾಲಿಕ ಅನುಮತಿ ಮೇರೆಗೆ ಅಡ್ಡಾಡುವದನ್ನು ನಿಲ್ಲಿಸಲು ಹೇಳಿದ್ದರು ಎಂದರೆ ಸರಿಯಲ್ಲ,

ಆ ಕಾರಣ ಅವರ ಆಸ್ತಿಯನ್ನು ಎತ್ತಿ ಹಾಕಲು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ,

ಮರುವಿಚಾರಣೆ ಇಲ್ಲಾ ,

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ

ಸಹಿ ಇದೆ,
ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ಕುಂದಗೋಳ.